ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 723(817)

ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿ ಗೌಡ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 20.09.2021

ಉತ್ತರಿಸುವವರು : ಮಾನ್ಯ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡು ಪ್ರಾಣಿಗಳ (ಚಿರತೆ) ದಾಳಿಯಿಂದ ರೈತರು, ಜಾನುವಾರುಗಳ ಮೇಲೆ ಆದ ದಾಳಿ ಪ್ರಕರಣಗಳೆಷ್ಟು; (ತಾಲ್ಲೂಕುವಾರು ವಿವರ ನೀಡುವುದು)	ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಚಿರತೆ ದಾಳಿಯಿಂದ ಯಾವುದೇ ಮಾನವ-ಪ್ರಾಣ ಹಾನಿ ಸಂಭವಿಸಿರುವುದಿಲ್ಲ. ಮುಂದುವರೆದು, ಚಿರತೆ ದಾಳಿಯಿಂದ ಉಂಟಾದ ಸಾಕುಪ್ರಾಣಿ ಹತ್ಯೆ ಪ್ರಕರಣಗಳ ತಾಲ್ಲೂಕುವಾರು ವಿವರ ಹಾಗೂ ಪಾವತಿಸಿದ ದಯಾತ್ಮಕ ಧನದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ	ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಆದಂತಹ ದಾಳಿ ಪ್ರಕರಣಗಳಲ್ಲಿ ಪ್ರಾಣ ಹಾನಿಯಾದ ಪ್ರಕರಣಗಳೆಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) ಈ ಪ್ರಕರಣಗಳಲ್ಲಿ ರೈತರಿಗೆ ಜಾನುವಾರುಗಳಿಗೆ ನೀಡಿರುವ ಪರಿಹಾರ ಹಣವೆಷ್ಟು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)-	
ಇ	ಈ ಕಾಡು ಪ್ರಾಣಿಗಳನ್ನು ಹಿಡಿಯಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)	ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಮುಖವಾಗಿ ಚಿರತೆಗಳ ಹಾವಳಿ ಕಂಡುಬಂದಿದ್ದು, ಅರಣ್ಯದಂಚಿನ ಗ್ರಾಮಗಳಲ್ಲಿ ಚಿರತೆಗಳ ಚಲನ-ವಲನ ಕಂಡುಬಂದ ಕೂಡಲೇ, ಸೂಕ್ತ ಪ್ರದೇಶವನ್ನು ಗುರುತಿಸಿ ಬೋನುಗಳನ್ನು ಇಟ್ಟು, ಸೆರೆಸಿಕ್ಕ ಚಿರತೆಯನ್ನು ಸೂಕ್ತ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ.
ಈ	ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ, ಬೆಕ್ಕಳಲೆ, ಚೊಟ್ಟನಹಳ್ಳಿ, ಗೂಳೂರು ದೊಡ್ಡಿ, ಹುರುಗಲವಾಡಿ, ನಂಬಿನಾಯಕನಹಳ್ಳಿ, ಹೊಸಗಾವಿ, ಮಾರಂಗೆರೆಚಿಕ್ಕದೊಡ್ಡಿ, ಹರಳಕೆರೆ ಗ್ರಾಮಗಳಲ್ಲಿ ಕಳೆದ ಒಂದೆರಡು ತಿಂಗಳುಗಳಿಂದ ಚಿರತೆ ಜಾನುವಾರು ಮತ್ತು ರೈತರ ಮೇಲೆ ದಾಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಅರಣ್ಯದಂಚಿನ ಗ್ರಾಮಗಳಲ್ಲಿ ಚಿರತೆ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:- 1. ಕಾಡಂಚಿನ ಗ್ರಾಮಗಳಲ್ಲಿ ವಾಸಿಸುವ ಜನರಿಗೆ ಜನ ಸಂಪರ್ಕ ಸಭೆಗಳ ಮೂಲಕ ವನ್ಯಪ್ರಾಣಿಗಳ ಬಗ್ಗೆ, ಚಲನ-ವಲನಗಳ ಬಗ್ಗೆ ಅರಿವು ಮೂಡಿಸಿ ವನ್ಯಪ್ರಾಣಿಗಳು ಕಂಡು ಬಂದ ಕೂಡಲೇ ಸ್ಥಳೀಯ ಅರಣ್ಯ ಇಲಾಖಾ ಅಧಿಕಾರಿಗಳ ಸೂಚನೆಗೆ ತರಲು ಮುಂಜಾಗ್ರತ ಕ್ರಮ ವಹಿಸಲಾಗುತ್ತಿದೆ. 2. ಮಾನವ-ವನ್ಯಪ್ರಾಣಿ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದಿಂದ ಹೊರಡಿಸಿರುವ ಮಾರ್ಗಸೂಚಿಗಳನ್ವಯ ಕಡ್ಡಾಯವಾಗಿ ಕ್ರಮ ವಹಿಸಲು ಕ್ಷೇತ್ರಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಉದಾಹರಣೆಗೆ:- ಮಾನವ-ಚಿರತೆ ಸಂಘರ್ಷದ ಸಮಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ನಿರ್ದಿಷ್ಟವಾಗಿ ಕೇಂದ್ರ ಸರ್ಕಾರವು ತನ್ನ ಮಾರ್ಗಸೂಚಿಗಳಲ್ಲಿ ಹೊರಡಿಸಿದೆ. 3. ಮಾನವ ಆವಾಸಸ್ಥಳಗಳ ಸುತ್ತ ಬೆಳೆದಿರುವ ಕುರುಚಲು ಕಾಡನ್ನು ತೆರವುಗೊಳಿಸುವ ಮೂಲಕ ಚಿರತೆಗಳು ಗ್ರಾಮದೊಳಗೆ ನುಸುಳುವುದನ್ನು ತಡೆಯಬಹುದಾಗಿದೆ.
ಉ	ಹಾಗಿದ್ದಲ್ಲಿ ಚಿರತೆಯನ್ನು ಹಿಡಿಯಲು ಇಲಾಖೆ ತೆಗೆದುಕೊಂಡ ಕ್ರಮಗಳಾವುವು; ಈ ಸಂಬಂಧ ವಿಳಂಬ ಮಾಡುತ್ತಿರುವ ಇಲಾಖಾ ಅಧಿಕಾರಿಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ;	

ಕ್ರ.ಸಂ	ಪ್ರಶ್ನೆ	ಉತ್ತರ
		4. ಮಾನವ-ಚಿರತೆ ಸಂಘರ್ಷ ಹೆಚ್ಚಾಗಿ ಕಂಡುಬರುವ ಪ್ರದೇಶಗಳನ್ನು ಗುರುತಿಸಿ ಸೂಕ್ತ ಸ್ಥಳಗಳಲ್ಲಿ ಕ್ಯಾಮರಾ ಟ್ರ್ಯಾಪ್ ಗಳನ್ನು ಅಳವಡಿಸಿ, ಉಪಟಳ ನೀಡುತ್ತಿರುವ ಚಿರತೆಯನ್ನು ನಿರ್ದಿಷ್ಟವಾಗಿ ಗುರುತಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. 5. ಅಲ್ಲದೇ, ಚಿರತೆ ಹಾವಳಿ ಹೆಚ್ಚಾಗಿರುವ ವಿಭಾಗಗಳಲ್ಲಿ ಚಿರತೆಯನ್ನು ಸೆರೆ ಹಿಡಿಯಲು ಬೇಕಾದ ಬೋನು, Tranquilizer Gun ಮತ್ತಿತರ ಉಪಕರಣಗಳನ್ನು ಅಗತ್ಯತೆ ಮೇರೆಗೆ ಸರಬರಾಜು ಮಾಡಲಾಗುತ್ತಿದೆ. ಚಿರತೆಗಳನ್ನು ಹಿಡಿಯಲು ನಿರ್ದಿಷ್ಟವಾದ ಸಮಯವನ್ನು ಗೊತ್ತುಪಡಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ, ಚಿರತೆ ಹಾವಳಿ ಕಂಡುಬಂದ ಗ್ರಾಮಗಳಲ್ಲಿ ತಕ್ಷಣ ಸಂಬಂಧಪಟ್ಟ ವಲಯದ ಉಪ ವಲಯ ಅರಣ್ಯಾಧಿಕಾರಿ ಮತ್ತು ಕ್ಷೇತ್ರ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಚಿರತೆಯ ಚಲನ ವಲನಗಳನ್ನು ಗಮನಿಸಿ, ಸೂಕ್ತ ಸ್ಥಳಗಳಲ್ಲಿ ಬೋನುಗಳನ್ನು ಇಟ್ಟು ಚಿರತೆಯನ್ನು ಸೆರೆಹಿಡಿಯಲು ಕ್ರಮವಹಿಸಲಾಗುತ್ತಿದೆ.
ಊ	ದಾಳಿಗೊಳಗಾದ ರೈತರ ಜಾನುವಾರುಗಳಿಗೆ ಪರಿಹಾರ ನೀಡಲಾಗಿದೆಯೇ; ನೀಡಿದ್ದಲ್ಲಿ ಎಷ್ಟು ಪರಿಹಾರ ನೀಡಲಾಗಿದೆ; ಈ ಪರಿಹಾರ ಜಾನುವಾರುಗಳ ಪ್ರಸ್ತುತ ಬೆಲೆಗೆ ಅನುಗುಣವಾಗಿ ನೀಡಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು)	ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಸಾಕುಪ್ರಾಣಿ ಹತ್ಯೆ ಪ್ರಕರಣಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ ಅಪಜೀ 109 ಎಫ್.ಎ.ಪಿ 2014 ದಿನಾಂಕ 13-08-2014ರ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ರೂ. **32,95,093.00**/-ಗಳ ಪರಿಹಾರ ಪಾವತಿಸಲಾಗಿದೆ. ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಸಾಕುಪ್ರಾಣಿ ಹತ್ಯೆ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಅಪಜೀ-109-ಎಫ್ಎಪಿ-2014, ದಿನಾಂಕ: 13/08/2014ರನ್ವಯ ಕುರಿ, ಮೇಕೆ ಮೃತಪಟ್ಟಲ್ಲಿ ರೂ.5,000/-ಗಳ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ. ವನ್ಯಪ್ರಾಣಿ ದಾಳಿಯಿಂದ ಹಸು, ಎತ್ತು, ಎಮ್ಮೆ ಮತ್ತು ಕೋಣ ಮೃತಪಟ್ಟಲ್ಲಿ ಸರ್ಕಾರದ ಆದೇಶ ಸಂಖ್ಯೆ: ಅಪಜೀ 144 ಎಫ್ಎಪಿ 2020, ದಿನಾಂಕ: 20.04.2021ರನ್ವಯ ಎಸ್.ಡಿ.ಆರ್.ಎಫ್ (State Disaster Reponse Fund) ರಲ್ಲಿನ ದರಗಳಂತೆ 2021-22ನೇ ಸಾಲಿನಿಂದ ಜಾರಿಗೆ ಬರುವಂತೆ ರೂ.30,000/-ಗಳ ಗರಿಷ್ಠ ಮೊತ್ತದ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.

ಸಂಖ್ಯೆ: ಅಪಜೀ 188 ಎಫ್‌ಡಬ್ಲ್ಯೂಎಲ್ 2021

(ಉಮೇಶ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು

FEE 188 FWL 2021

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಪ್ರಶ್ನೆ ಸಂಖ್ಯೆ: 817ಕ್ಕೆ ಉತ್ತರ

ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಕಳೆದ 03 ವರ್ಷಗಳಲ್ಲಿ ಚಿರತೆ ದಾಳಿಯಿಂದ ಉಂಟಾದ ಸಾಕುಪ್ರಾಣಿ ಹತ್ಯೆ ಪ್ರಕರಣಗಳ ತಾಲ್ಲೂಕುವಾರು ವಿವರ ಹಾಗೂ ಪಾವತಿಸಿದ ದಯಾತ್ಮಕ ಧನದ ವಿವರ

ಕ್ರ.ಸಂ.	ವರ್ಷ	ತಾಲ್ಲೂಕು	ಪ್ರಕರಣ	ಮೊತ್ತ (ರೂ.ಗಳಲ್ಲಿ)
1	2018-19	ಮಂಡ್ಯ	4	18000.00
2		ಮದ್ದೂರು	14	68848.00
3		ಮಳವಳ್ಳಿ	19	122500.00
4		ಶ್ರೀರಂಗಪಟ್ಟಣ	1	4750.00
5		ಪಾಂಡವಪುರ	14	76000.00
6		ನಾಗಮಂಗಲ	41	300000.00
7		ಕೆ.ಆರ್.ಪೇಟೆ	32	220000
ಒಟ್ಟು :			125	**810098.00**
1	2019-20	ಮಂಡ್ಯ	5	45000.00
2		ಮದ್ದೂರು	6	36000.00
3		ಮಳವಳ್ಳಿ	6	33800.00
4		ಶ್ರೀರಂಗಪಟ್ಟಣ	1	5000.00
5		ಪಾಂಡವಪುರ	24	127000.00
6		ನಾಗಮಂಗಲ	25	220200.00
7		ಕೆ.ಆರ್.ಪೇಟೆ	15	104000.00
ಒಟ್ಟು :			82	**571000.00**
1	2020-21	ಮಂಡ್ಯ	9	59000.00
2		ಮದ್ದೂರು	38	283000.00
3		ಮಳವಳ್ಳಿ	24	164200.00
4		ಶ್ರೀರಂಗಪಟ್ಟಣ	-	-
5		ಪಾಂಡವಪುರ	29	197000.00
6		ನಾಗಮಂಗಲ	93	688000.00
7		ಕೆ.ಆರ್.ಪೇಟೆ	20	113755.00
ಒಟ್ಟು :			213	**1504955.00**
1	2021-22 (31-08-2021ರ ಅಂತ್ಯಕ್ಕೆ)	ಮಂಡ್ಯ	10	70000.00
2		ಮದ್ದೂರು	9	60000.00
3		ಮಳವಳ್ಳಿ	-	-
4		ಶ್ರೀರಂಗಪಟ್ಟಣ	-	-
5		ಪಾಂಡವಪುರ	17	77040.000
6		ನಾಗಮಂಗಲ	18	73000.00
7		ಕೆ.ಆರ್.ಪೇಟೆ	15	129000.00
ಒಟ್ಟು :			69	**409040.00**
		ಒಟ್ಟಾರೆ	**489**	**32,95,093.00**